ಖರ್ಗೆಯವರು ಇಂತಹ ದಿನಾಂಕದಂದು ಇದರ ನಿರ್ಮಾಣ ಕಾರ್ಯ ಪ್ರಾರಂಭ ಮಾಡುತ್ತೇವೆ ಎಂದು ಹೇಳಿದ್ದು ಕೇಳಿ ನನಗಂತೂ ಬಹಳ ಸಂತೋಷವಾಯಿತು. ಈ ಇಂಟರ್ ನ್ಯಾಷನಲ್ ಏರ್‌ಪೋರ್ಟಿಗೆ ಬೆಂಗಳೂರಿನ ಸಂಸ್ಥಾಪಕರಾದಂತಹ ಕೆಂಪೇಗೌಡರ ಹೆಸರನ್ನು ಇಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಪ್ರಾರ್ಥಿಸಿಕೊಳ್ಳಲಿಕ್ಕೆ ಇಚ್ಛಿಪಡುತ್ತೇನೆ. ಇದಕ್ಕೆ ಮಾನ್ಯ ಸಚಿವರು ಪ್ರತಿಕ್ರಿಯಿಸಬೇಕೆಂದು ಕೋರುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ, ವಿಮಾನ ನಿಲ್ದಾಣ ಆಗುವುದಕ್ಕಿಂತ ಮುಂಚೆಯೇ ನಾವು ಅದಕ್ಕೆ ಯಾವ ಹೆಸರಿಡಬೇಕೆಂಬ ಬಗ್ಗೆ ಚರ್ಚೆ ಮಾಡಿದರೆ ಅದೊಂದು ಕಾಂಟ್ರವರ್ಸಿಯಾಗುತ್ತದೆ. ಮೊದಲು ನಾವು ಏರ್‌ಪೋರ್ಟ್ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸೋಣ. ನಂತರ ಅದಕ್ಕೆ ಏನು ಹೆಸರಿಡಬೇಕೆಂಬ ಬಗ್ಗೆ ಯೋಚಿಸೋಣ.

ಬೆಂಗಳೂರು ನಗರದಲ್ಲಿ ಅಸಮರ್ಪಕ ಪಡಿತರ ವ್ಯವಸ್ಥೆ.

264(2899) ಶ್ರೀ ಸುಬ್ಬಾರೆಡ್ಡಿ ಕೆ.ಎನ್. (ಬಸವನಗುಡಿ) :— ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಗ್ರಾಹಕ ಪಡಿತರ ವ್ಯವಸ್ಥೆ ರಾಜ್ಯದಲ್ಲಿ ಅದರಲ್ಲೂ ಬೆಂಗಳೂರು ನಗರದಲ್ಲಿ ಅಸಮರ್ಪಕ ನಿರ್ವಹಣೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಬಂದಿದ್ದಲ್ಲಿ ಕಳೆದ ಮೂರು ವರ್ಷಗಳಲ್ಲಿ ಅಂತಹ ಎಷ್ಟು ಪ್ರಕರಣಗಳನ್ನು ಸರ್ಕಾರ ಪತ್ತೆ ಹಚ್ಚಿದೆ?

3) ಹಾಗಿದ್ದಲ್ಲಿ ಎಷ್ಟು ಪ್ರಕರಣಗಳಲ್ಲಿ ಕೇಸುಗಳನ್ನು ದಾಖಲು ಮಾಡಲು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರಿಕ ಸರಬರಾಜು ರಾಜ್ಯ ಸಚಿವರು) :—

1) ಬೆಂಗಳೂರು ನಗರ ಹಾಗೂ ರಾಜ್ಯದಲ್ಲಿ ಪಡಿತರ ವ್ಯವಸ್ಥೆ ಸಮರ್ಪಕವಾಗಿ ನಡೆಯುತ್ತಿದ್ದು, ಕೆಲವು ನಿರ್ದಿಷ್ಟ ಪ್ರಕರಣಗಳಲ್ಲಿ ಮಾತ್ರ ಲೋಪಗಳು ಕಂಡು ಬಂದದ್ದು, ಅಂತಹ ಪ್ರಕರಣಗಳಲ್ಲಿ ಕಾನೂನಿನನ್ವಯ ಕ್ರಮ ಕೈಗೊಳ್ಳಲಾಗಿದೆ.

2) ಬೆಂಗಳೂರು ನಗರ ಪ್ರದೇಶದ ವ್ಯಾಪ್ತಿಯಲ್ಲಿ ಕಳೆದ 3 ವರ್ಷಗಳಲ್ಲಿ ಈ ಕೆಳಗಿನಂತೆ ಅವ್ಯವಹಾರದ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ.

1998-99	1999-2000	2000-01	ಒಟ್ಟು
327	208	141	676

3. ಕಳೆದ ಮೂರು ವರ್ಷಗಳಲ್ಲಿ 676 ನ್ಯಾಯಬೆಲೆ ಅಂಗಡಿಗಳ ವಿಷಯದಲ್ಲಿ ನಿಯಮ ಉಲ್ಲಂಘನೆ ಕಂಡುಬಂದಿತು.

ಇದರಲ್ಲಿ 104 ನ್ಯಾಯಬೆಲೆ ಅಂಗಡಿಗಳ ವಿಷಯದಲ್ಲಿ ನಿಗದಿತ ವೇಳೆಯಲ್ಲಿ ಬಾಗಿಲು ತೆಗೆದಿಲ್ಲದಿರುವ ನೋಟಿಸ್ ಬೋರ್ಡ್ ಹಾಕಿಲ್ಲ ಇಂತಹ ಸಣ್ಣಪುಟ್ಟ ಲೋಪದೋಷಗಳು ಕಂಡುಬಂದಿರುವುದರಿಂದ, ಎಚ್ಚರಿಕೆ ನೀಡಿ ಪ್ರಕರಣವನ್ನು ಮುಕ್ತಾಯ ಮಾಡಲಾಗಿರುತ್ತದೆ.

ಉಳಿದ 572 ಪ್ರಕರಣಗಳಲ್ಲಿ ಕರ್ನಾಟಕ ಅಗತ್ಯ ವಸ್ತುಗಳ (ಸಾರ್ವಜನಿಕ ವಿತರಣಾ ಪದ್ಧತಿ) ನಿಯಂತ್ರಣ ಆದೇಶ, 1992ರಡಿ ಪ್ರಕರಣಗಳನ್ನು ದಾಖಲು ಮಾಡಿಕೊಳ್ಳಲಾಗಿದೆ. ಸದರಿ ಪ್ರಕರಣಗಳನ್ನು ಈ ಕೆಳಕಂಡಂತೆ ವಿಲ್ ಮಾಡಲಾಗಿದೆ.

ಅ) 85 ನ್ಯಾಯಬೆಲೆ ಅಂಗಡಿಗಳ ಪ್ರಾಧಿಕಾರವನ್ನು ಅಮಾನತ್ತಿನಲ್ಲಿಟ್ಟು ವಿಚಾರಣೆ ನಡೆಸಿ, ದಂಡ ವಿಧಿಸಿ, ಎಚ್ಚರಿಕೆ ನೀಡಿ ಅಮಾನತ್ತು ತೆರವುಗೊಳಿಸಲಾಗಿದೆ.

ಆ) 18 ಪ್ರಕರಣಗಳಲ್ಲಿ ಕಳೆದ ಒಂದು ವರ್ಷದೀಚೆಗೆ ಪ್ರಾಧಿಕಾರಣವನ್ನು ಅಮಾನತ್ತಿನಲ್ಲಿಟ್ಟುಕೊಂಡಿದ್ದು, ಈ ಪ್ರಕರಣಗಳು ವಿಚಾರಣೆಯ ಹಂತದಲ್ಲಿದೆ.

ಇ) 29 ನ್ಯಾಯಬೆಲೆ ಅಂಗಡಿಗಳ ಪ್ರಾಧಿಕರಣವನ್ನು ರದ್ದುಗೊಳಿಸಲಾಗಿದೆ.

ಈ) 66 ನ್ಯಾಯಬೆಲೆ ಅಂಗಡಿಗಳ ಮಾಲೀಕರಿಗೆ ಎಚ್ಚರಿಕೆ ನೀಡಲಾಗಿದೆ.

ಉ) 374 ನ್ಯಾಯಬೆಲೆ ಅಂಗಡಿಗಳವರಿಗೆ ದಂಡ ವಿಧಿಸಿ, ರೂ.2,67,100-00ಗಳನ್ನು ಸರ್ಕಾರಕ್ಕೆ ಜಮಾ ಮಾಡಲಾಗಿದೆ.

ಶ್ರೀ ಕೆ.ಎಸ್. ಸುಬ್ಬಾರೆಡ್ಡಿ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ. ಇದರಲ್ಲಿ ಮುಖ್ಯವಾಗಿ ಬೆಂಗಳೂರು ನಗರದಲ್ಲಿ ಮತ್ತು ಇಡೀ ರಾಜ್ಯದಲ್ಲಿ ಸಕ್ಕರೆ ಮತ್ತು ಸೀಮೆಎಣ್ಣೆ ವಿತರಣೆ ಸರಿಯಾಗಿ ಆಗುತ್ತಿಲ್ಲ. ಅನೇಕ ನ್ಯಾಯಬೆಲೆ ಅಂಗಡಿಗಳಲ್ಲಿ ಬೋರ್ಡ್ ಹಾಕಿರುವುದಿಲ್ಲ. ಜನರಿಗೆ ಎಲ್ಲಿ ಈ ಪದಾರ್ಥಗಳು ಸಿಗುತ್ತವೆ ಎಂದು ಸರಿಯಾಗಿ ಮಾರ್ಗದರ್ಶನ ಇಲ್ಲ. ಈ ಅಂಗಡಿಗಳು ಯಾವಾಗಲೂ ಮುಚ್ಚಿರುತ್ತವೆ. ನ್ಯಾಯ ಬೆಲೆ ಅಂಗಡಿಗಳಲ್ಲಿ ಸಿಗುತ್ತವೆ ಎಂದು ಮಾತ್ರ ಬೋರ್ಡ್ ಹಾಕಿದ್ದಾರೆ. ಈ ರೀತಿ ನಡೆಯದ ಹಾಗೆ ನೋಡಿಕೊಳ್ಳಬೇಕು. ಕಲಬೆರಕೆಯನ್ನು ಕೂಡ ಮಾನ್ಯ ಸಚಿವರು ತೀವ್ರವಾಗಿ ತೆಗೆದುಕೊಳ್ಳಬೇಕಾಗಿದೆ. ಪೆಟ್ರೋಲ್ ಕಲಬೆರಕೆ ಬೆಂಗಳೂರು

ನಗರದಲ್ಲಿ ಅಲ್ಲ, ಇಡೀ ಸಂಸ್ಥಾನದಲ್ಲಿ ಪೆಟ್ರೋಲ್ ಜೊತೆ ಸೀಮೆಎಣ್ಣೆ ಬೆರೆಸುತ್ತಿದ್ದಾರೆ. ಇದರಿಂದ ಪಲ್ಯೂಷನ್ ಕೂಡ ಹೆಚ್ಚಾಗುತ್ತಿದೆ. ಇದನ್ನು ಯಾವ ರೀತಿ ಕಡಿಮೆ ಮಾಡುತ್ತೀರಿ, ಚೆಕ್ಕಿಂಗ್ ಯಾವ ರೀತಿ ನಡೆಯುತ್ತಿದೆ ಎಂದು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಡಿ.ಬಿ. ಇನಾಂದಾರ್ :— ಮಾನ್ಯ ಅಧ್ಯಕ್ಷರೆ, ಅಂಗಡಿಗಳಲ್ಲಿ ಆಗುತ್ತಿರತಕ್ಕಂತಹ ಕೆಲವೊಂದು ನ್ಯೂನತೆ ಬಗ್ಗೆ ಇನ್‌ಸ್ಪೆಕ್ಷನ್ ಮಾಡುವುದಕ್ಕೆ ಆದೇಶ ಹೊರಡಿಸಿದ್ದೇವೆ. ಅದರ ಜೊತೆಗೆ ಸಕ್ಕರೆ ಮತ್ತು ಸೀಮೆಎಣ್ಣೆ ಕಡಿಮೆ ಆಗುವುದಕ್ಕೆ ಕಾರಣವೇನೆಂದರೆ, ಕೇಂದ್ರ ಸರ್ಕಾರದಿಂದ ಅಲಾಟ್‌ಮೆಂಟ್ ಕೊಡುವುದು ಕಡಿಮೆ ಮಾಡಿದ್ದಾರೆ. ಕೇವಲ ಬಡತನ ರೇಖೆಯಿಂದ ಕೆಳಗಿರತಕ್ಕಂತಹ ಕುಟುಂಬದವರಿಗೆ ಮಾತ್ರ ಸಕ್ಕರೆ ಮತ್ತು ಸೀಮೆಎಣ್ಣೆ ಕೊಡತಕ್ಕಂತಹ ಆದೇಶ ಬಂದಿರುವುದರಿಂದ ತೊಂದರೆಯಾಗಿದೆ. ಕೇಂದ್ರದಿಂದ 20,000 ಟನ್ ಬರಬೇಕಾಗಿದ್ದ ಸಕ್ಕರೆ, ಕಡಿಮೆಯಾಗಿ 8,000 ಟನ್‌ವರೆಗೆ ಬರುತ್ತಿರುವುದರಿಂದ ಕೇವಲ ಬಡತನ ರೇಖೆಯಿಂದ ಕೆಳಗಿರತಕ್ಕಂತಹ ಕಾರ್ಡುದಾರರಿಗೆ ಸಕ್ಕರೆ ಕೊಡುತ್ತಿದ್ದೇವೆ. ಉಳಿದವರಿಗೆ ನಿಲ್ಲಿಸಿದ್ದೇವೆ ಎನ್ನುವ ಮಾತನ್ನು ತಿಳಿಸುತ್ತಿದ್ದೇನೆ. ಪೆಟ್ರೋಲ್‌ನಲ್ಲಿ ಕಲಬೆರಕೆ ಆಗತಕ್ಕಂತಹ ವಿಷಯ ಹೇಳಿದರು, ಸಾಲ್ವೆಂಟ್ ಉಪಯೋಗ ಮಾಡತಕ್ಕಂತಹ ವಿಷಯದಲ್ಲಿ ನಮ್ಮ ಕಮಿಷನರ್ ಆಫ್ ಪೋಲಿಸ್‌ರವರು ಅಂತಹ ಬಹಳಷ್ಟು ಸಾಲ್ವೆಂಟ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಅದಲ್ಲದೆ ಪೆಟ್ರೋಲ್ ಬಂಕ್‌ಗಳ ಇನ್‌ಸ್ಪೆಕ್ಷನ್ ಮಾಡುತ್ತಿದ್ದೇವೆ. ನಾನು ಮಾನ್ಯ ಸದಸ್ಯರ ಜೊತೆಯಲ್ಲಿ ಅವರ ಕ್ಷೇತ್ರಕ್ಕೆ ಹೋಗಿ ಇನ್‌ಸ್ಪೆಕ್ಷನ್ ಮಾಡಿದ್ದೇನೆ. ಹೆಚ್ಚಿನ ಪ್ರಮಾಣದಲ್ಲಿ ಇನ್‌ಸ್ಪೆಕ್ಷನ್ ಕಾರ್ಯವನ್ನು ಕೈಗೊಂಡು ಇರತಕ್ಕಂತಹ ಪಲ್ಯೂಷನ್ ಕಡಿಮೆ ಮಾಡುವುದಕ್ಕೆ ಸರ್ಕಾರದಿಂದ ವ್ಯವಸ್ಥೆ ಮಾಡುತ್ತೇವೆಂದು ತಮ್ಮ ಮೂಲಕ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಕೆ. ಎನ್. ಸುಬ್ಬಾರೆಡ್ಡಿ :— ಬಳಿ ಪೆಟ್ರೋಲ್ ಎಂದು ತಮಗೆ ಗೊತ್ತಿದೆ. ಅದರ ಬಗ್ಗೆ ತಾವು ಏನು ಕಾರ್ಯಕ್ರಮ ಜರುಗಿಸುತ್ತಿದ್ದೀರಿ? ಪೆಟ್ರೋಲ್ ಬಂಕ್‌ಗಳಲ್ಲಿ ಮೆಷರ್‌ಮೆಂಟ್ ಬಗ್ಗೆ ಮಾನ್ಯ ಸಚಿವರು ಎರಡು-ಮೂರು ಕಡೆ ಚೆಕ್ ಮಾಡಿದ್ದಾರೆ. ಅದರ ಮೇಲೆ ಮೊಕದ್ದಮೆ ಆಯಿತೇ, ಇಲ್ಲ ಏಕೆಂದರೆ ಎರಡು ಸಾರಿ ಮೂರು ಸಾರಿ ಹಿಂದಿನ ಮತ್ತು ಈಗಿನ ಮಂತ್ರಿಗಳನ್ನು ಕರೆದುಕೊಂಡು ಹೋಗಿ ಚೆಕ್ ಮಾಡಿಸಿದ್ದೇವೆ. ಇಡೀ ರಾಜ್ಯದಲ್ಲಿ ಕಲಬೆರಕೆ ಮತ್ತು ಮೆಷರ್‌ಮೆಂಟ್‌ನಲ್ಲಿ ಅನ್ಯಾಯ ನಡೆಯುತ್ತಿದೆ. ನಿಮ್ಮ ಇಲಾಖೆಯವರಿಗೂ ಮತ್ತು ಇದಕ್ಕೂ ಅಂಡರ್ ಸ್ಟ್ಯಾಂಡಿಂಗ್ ಇದೆಯಾ? ಏಕೆ ಈ ರೀತಿ ಅನ್ಯಾಯವಾಗುತ್ತಿದೆ? ತಾವು ಸೀರಿಯಸ್ಸಾಗಿ ಚೆಕ್ ಮಾಡುತ್ತಿದ್ದೀರಾ? ಮೊಕದ್ದಮೆ ಹಾಕುತ್ತೇವೆಂದು ಹೇಳಿದ್ದಾರೆ. ಎಷ್ಟು ಪೆಟ್ರೋಲ್ ಬಂಕ್‌ಗಳಲ್ಲಿ ಮೊಕದ್ದಮೆ ಹಾಕಿದ್ದೀರಿ?

ಶ್ರೀ ಡಿ.ಬಿ. ಇನಾಂದಾರ್:— ಆ ವಿವರಗಳು ನನ್ನ ಬಳಿ ಇಲ್ಲ, ಮಾನ್ಯ ಸುಬ್ಬಾರೆಡ್ಡಿಯವರು ಕೇಳಿದ ಪ್ರಶ್ನೆ ಸಾಲ್ವೆಂಟ್ ಬಗ್ಗೆ ತಮಗೆ ಹೇಳಿದ್ದೇನೆ. ಇದಕ್ಕೆ ಕಮಿಷನರ್ ಆಫ್ ಪೋಲಿಸ್ ಇನ್‌ಸ್ಪೆಕ್ಟಿಂಗ್ ಅಥಾರಿಟಿ ಇರುತ್ತಾರೆ. ಉಳಿದ ಕಡೆ ಆಹಾರ ಇಲಾಖೆಯ ಅಧಿಕಾರಿಗಳು, ಡೆಪ್ಯುಟಿ ಡೈರೆಕ್ಟರ್ ಇನ್‌ಸ್ಪೆಕ್ಟಿಂಗ್ ಅಥಾರಿಟಿ ಇರುತ್ತಾರೆ. ಬೆಂಗಳೂರಿನಲ್ಲಿ ಇನ್‌ಫಾರ್ಮಲ್ ರೇಷನಿಂಗ್ ಏರಿಯಾದಲ್ಲಿ ಪೋಲಿಸ್ ಕಮಿಷನರ್ ಮತ್ತು ಪೋಲಿಸ್ ಅಧಿಕಾರಿಗಳು ಸಾಲ್ವೆಂಟ್ ಬಳಿ ಪೆಟ್ರೋಲ್ ಬಗ್ಗೆ ಇನ್‌ಸ್ಪೆಕ್ಷನ್ ಮಾಡುವ ಕಾರ್ಯ ನಡೆಸಿದ್ದಾರೆ. ಇಂತಹ ಪ್ರಕರಣಗಳಲ್ಲಿ ಪತ್ತೆಯಾಗಿರುವಂತಹ ಸಾಕಷ್ಟು ಪ್ರಕರಣಗಳು ಪತ್ರಿಕೆಯಲ್ಲಿ ಕೂಡ ಬಂದಿವೆ, ಅದನ್ನು ತಾವೂ ಕೂಡ ಓದಿದ್ದೀರಿ. ಇನ್ನುಳಿದ ಪೆಟ್ರೋಲ್ ಬಂಕ್‌ಗಳಲ್ಲಿ ಕಡಿಮೆ ಅಳತೆ ಕೊಡುವ ವಿಚಾರ ತಾವು ನಮ್ಮ ಗಮನಕ್ಕೆ ತಂದಿದ್ದೀರಿ, ಮಾಪನ ಇಲಾಖೆಯ ಅಧಿಕಾರಿಗಳಿಗೆ ಹೆಚ್ಚಿನ ಇನ್‌ಸ್ಪೆಕ್ಷನ್ ಮಾಡುವುದಕ್ಕೆ ನಾವು ಆದೇಶ ಕೊಟ್ಟಿದ್ದೇವೆ. ಕೆಲವು ದೂರುಗಳೂ ಕೂಡ ಬಂದಿವೆ. ಇಲ್ಲಿ ಸರಬರಾಜು ಮಾಡುವ ಡೀಸಲ್ ಕ್ವಾಲಿಟಿ ಸರಿ ಇಲ್ಲವೆಂದು ನನಗೆ ಮಾಹಿತಿ ಬಂದಿದೆ. ಅದರ ಬಗ್ಗೆ ಇನ್‌ಸ್ಪೆಕ್ಷನ್ ಮಾಡುವ ಅಧಿಕಾರವನ್ನು ನಾವು ಸರ್ಕಾರದಿಂದ ಹೊರಡಿಸಿದ್ದೇವೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಅಧ್ಯಕ್ಷರು:— ಮುಂದಿನ ಐದು ಪ್ರಶ್ನೆಗಳನ್ನು ನಾವು ಮುಂದಿನ ದಿವಸ ತೆಗೆದುಕೊಳ್ಳುತ್ತೇವೆ. ನಿಮ್ಮ ಪ್ರಶ್ನೆಗಳು ಲ್ಯಾಪ್ಸ್ ಆಗುವುದಿಲ್ಲ, ಪ್ರಶ್ನೋತ್ತರ ವೇಳೆಗೆ ನಾವು 40 ನಿಮಿಷ ಹೆಚ್ಚಿಗೆ ತೆಗೆದುಕೊಂಡಿದ್ದೇವೆ. ಸಭೆ ಮುಗಿಯುವುದರೊಳಗಾಗಿ ನಿಮ್ಮ ಪ್ರಶ್ನೆಗಳನ್ನು ತೆಗೆದುಕೊಳ್ಳುತ್ತೇವೆ.

(ಅ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):— ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ 18ನೇ ಪಟ್ಟಿಯಲ್ಲಿರುವ 187 ಪ್ರಶ್ನೆಗಳ ಪೈಕಿ 135 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.

ಸೋಮವಾರಪೇಟೆ ತಾಲ್ಲೂಕಿನ ಚಿಕ್ಕಹೊಳೆಗೆ ಕಟ್ಟಲಾದ ಆಣೆಕಟ್ಟಿನಿಂದ ಇದುವರಿಗೂ ನೀರು ಸರಬರಾಜು ಮಾಡದಿರುವುದು.

2302(2835) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ):— ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.